ಕರ್ನಾಟಕ ಸರ್ಕಾರ

ಸಂಖ್ಯೆ:ಜೆಆರ್‌ಓ/ಎಸ್‌ಆರ್‌ಸಿ/30/2013-14

ಆಯುಕ್ತಾಲಯ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಆನಂದ ರಾವ್ ವೃತ್ತ, ಬೆಂಗಳೂರು,
ದಿನಾಂಕ: 19 -03-2018

ಇವರಿಗೆ

1) ಜಿಲ್ಲಾ ಆರೋಗ್ಯ ಮತ್ತು ಕುಟುಂಬ

ಕಲ್ಯಾಣಾಧಿಕಾರಿಗಳು ------------------ ಜಿಲ್ಲೆ

2) ಜಿಲ್ಲಾ ಶಸ್ತ್ರಚಿಕಿತ್ಸಕರು ಹಾಗೂ ಅಧೀಕ್ಷಕರು

ಜಿಲ್ಲಾ ಆಸ್ಪತ್ರೆ ------------------.

**ವಿಷಯ:** ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಆಯ್ಕೆಯಾದ ಸಾ.ಕ.ವೈದ್ಯಾಧಿಕಾರಿ /ತಜ್ಞ ವೈದ್ಯರುಗಳು/ದಂತ ಆರೋಗ್ಯಾಧಿಕಾರಿಗಳ ನೇಮಕಾತಿ ರದ್ದತಿ, ವಿಮೋಚನೆ ಮತ್ತು ರಾಜೀನಾಮೆ ಅಂಗೀಕಾರದ ಬಗ್ಗೆ.

**ಉಲ್ಲೇಖ:** ಆಕುಕ/210/ಹೆಚ್‌ಎಸ್‌ಹೆಚ್/2017, ಬೆಂಗಳೂರು, ದಿ:19.02.2018.

*****

ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಹೆಚ್ಚುವರಿ ಪಟ್ಟಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ತಜ್ಞ ವೈದ್ಯರು/ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಹುದ್ದೆಗೆ ಆಯ್ಕೆಯಾಗಿ ಸ್ಥಳ ನಿಯುಕ್ತಿಗೊಂಡು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದ ಅನುಬಂಧ-1 ರಲ್ಲಿನ 81 ತಜ್ಞ ವೈದ್ಯರುಗಳು 58 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು 01 ದಂತ ಆರೋಗ್ಯಾಧಿಕಾರಿಗಳ ನೇಮಕಾತಿಯನ್ನು ಕರ್ನಾಟಕ ನಾಗರೀಕ (ಸಾಮಾನ್ಯ ನೇಮಕಾತಿ ನಿಯಮಗಳ) 1977ರ ನಿಯಮ 18(3) ರನ್ವಯ ರದ್ದುಪಡಿಸಿ/ ಕರ್ತವ್ಯಕ್ಕೆ ವರದಿ ಮಾಡಿಕೊಂಡು ಅನಧಿಕೃತವಾಗಿ ಗೈರು ಹಾಜರಾದ ಅನುಬಂಧ-2 ರಲ್ಲಿನ 01 ತಜ್ಞ ವೈದ್ಯರು ಮತ್ತು 01 ದಂತ ಆರೋಗ್ಯಾಧಿಕಾರಿಗಳು ನೇಮಕಾತಿ ಹೊಂದಿದ ಹುದ್ದೆಗೆ ಅರ್ಹರಾಗಿಲ್ಲದೇ ಇರುವುದರಿಂದ ಇವರುಗಳನ್ನು ಕರ್ನಾಟಕ ಸಿವಿಲ್ ಸೇವೆಗಳು (ಖಾಯಂ ಪೂರ್ವ ಸೇವಾವಧಿ) 1977ರ ನಿಯಮ 6(1)ರನ್ವಯ ಸೇವೆಯಿಂದ ವಿಮೋಚನೆಗೊಳಿಸಿದೆ ಹಾಗೂ ಕರ್ತವ್ಯಕ್ಕೆ ವರದಿ ಮಾಡಿಕೊಂಡು ಹುದ್ದೆಗೆ ರಾಜೀನಾಮೆಯನ್ನು ಸಲ್ಲಿಸಿದ ಅನುಬಂಧ-3 ರಲ್ಲಿನ 01 ತಜ್ಞ ವೈದ್ಯರು ಮತ್ತು 01 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ರಾಜೀನಾಮೆಯನ್ನು ಉಲ್ಲೇಖ(1)ರಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 252(ಎ) ರನ್ವಯ ಅಂಗೀಕರಿಸಲಾಗಿರುತ್ತದೆ.

ಆದ್ದರಿಂದ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು/ ಜಿಲ್ಲಾ ಶಸ್ತ್ರಚಿಕಿತ್ಸಕರು ಹಾಗೂ ಅಧೀಕ್ಷಕರು ಇವರುಗಳಿಗೆ ಸರ್ಕಾರಿ ಆದೇಶ ರವಾನಿಸುತ್ತಾ ನಿಮ್ಮ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೈದ್ಯರುಗಳಿಗೆ ಅವರ ಹೆಸರಿನ ಮುಂದೆ ನಮೂದಿಸುವ ದಿನಾಂಕದಿಂದ ಅನ್ವಯವಾಗುವಂತೆ ರಾಜೀನಾಮೆಯನ್ನು ಅಂಗೀಕರಿಸಿರುವುದರಿಂದ ಸದರಿ ವೈದ್ಯರುಗಳಿಗೆ ಆದೇಶವನ್ನು ಜಾರಿ ಮಾಡಿ ಆಯುಕ್ತಾಲಯಕ್ಕೆ ವರದಿ ಮಾಡಲು ಸೂಚಿಸಿದೆ.

ಮುಖ್ಯ ಆಡಳಿತಾಧಿಕಾರಿಗಳು
ಆರೋಗ್ಯ ಮತ್ತು ಕು.ಕ ಸೇವೆಗಳು.